**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 1100/2015**

| | | |
|---|---|---|
| ಹೆಸರು | ಪ್ರಕಾಶ ಸಿ. | ಪ್ರಾ.ಸಾ.4 |
| ತಂದೆ/ಗಂಡನ ಹೆಸರು | ಚಂದ್ರಪ್ಪ | ಚಾ.ಸಾ.14 |
| ವಯಸ್ಸು | 38 ವರ್ಷ | |
| ಕೆಲಸ | ಚಾಲಕ | ಸಾ.ಪ್ರ.ವ.ಬೋ |
| ವಾಸ | ಚಿಕ್ಕ ದೇವಸಂದ್ರ | ದಿ: 27.09.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿರವರಿಂದ: –**

ನಾನು ಕೆಎ–01–ಎಮ್‌ವಿ–6910 ವಾಹನದ ಮಾಲೀಕರಾಗಿರುತ್ತೇನೆ. ಸದರಿ ವಾಹನವನ್ನು ಇಂಡ್ನೆಮಿಟಿ ಬಾಂಡ್ ಸಲ್ಲಿಸಿ ಮಧ್ಯಂತರ ಸ್ವಾಧೀನಕ್ಕೆ ಪಡೆದಿರುತ್ತೇನೆ. ನನಗೆ ಪ್ರಕರಣದ ಘಟನೆಯ ಕುರಿತು ಮಾಹಿತಿ ಇಲ್ಲ. ಪೊಲೀಸರು ಕರೆ ಮಾಡಿ ನನ್ನ ವಾಹನದಿಂದ ಅಪಘಾತವಾಗಿದೆ ಎಂದು ತಿಳಿಸಿದಾಗ ಠಾಣೆಗೆ ಹೋಗಿ ಬಾಂಡ್ ನೀಡಿ ವಾಹನವನ್ನು ಪಡೆದಿರುತ್ತೇನೆ. ನನಗೆ ಆರೋಪಿಯ ಪರಿಚಯವಿಲ್ಲ.

**[ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮಾನ್ಯ ಎಪಿಪಿರವರು ಕೋರಿದ್ದು, ಅನುಮತಿ ನೀಡಲಾಯಿತು.]**

**ಪಾಟಿ ಸವಾಲು : ಮಾನ್ಯ ಎಪಿಪಿರವರಿಂದ:–**

ದಿ: 29.03.2015 ರಂದು ನನ್ನ ಕಾರಿನ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿ ಅಪಘಾತಪಡಿಸಿರುತ್ತಾನೆ ಎಂದರೆ ಸರಿಯಲ್ಲ.

**ಆರೋಪಿ ಪರ ವಕೀಲರಿಂದ : ಪಾಟಿ ಸವಾಲು: ಇಲ್ಲ.**
**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**